ಹುಡುಗಿಯ ಪೈಕಿಯವರ ಮೂಗು ಮೇಲಾಗಿತ್ತಲ್ಲ? ಒಂದು ಮದುವೆಯ ಮಾತುಕತೆ ಅಂದರೆ ಎಷ್ಟೆಲ್ಲಾ ನಾಟಕ, ಭಾಗವತರಾಟ ಎಲ್ಲಾ ಇರುತ್ತಿತ್ತು ಅಂದರೆ ಹುಡುಗನ ಮನೆಯವರು ಮದುವಳಿಗೆಗೆ ಇಂತಿಷ್ಟೇ ಚಿನ್ನ, ಬಣ್ಣ ಹಾಕಬೇಕು. ಹುಡುಗನಿಗೆ ಕೊಡುವ ಬೆಳ್ಳಿಯ ಮಧುಪರ್ಕದ ಸಾಮಗ್ರಿಗಳು ಇಂತಿಷ್ಟೇ ತೂಕದ್ದಾಗಿರಬೇಕು, ಮದುವಣಿಗನ ಕುತ್ತಿಗೆಗೆ ಚೈನು, ಬೆರಳಿಗೆ ಉಂಗುರ, ಕೈಗಡಿಯಾರ, ಸೂಟು ಬೂಟು, ಮದುವೆಗೆ ಬರುವ ತಮ್ಮ ಹತ್ತಿರದ ಬಳಗಕ್ಕೆ ಸೀರೆ, ಬಟ್ಟೆ..., ಎಷ್ಟುದ್ದ ಬೇಕಾದರೂ ಇರುತ್ತಿತ್ತು ಪಟ್ಟಿ. ಎರಡೂ ಕಡೆಯ ಖರ್ಚು ನೀವೇ ಹಾಕಿ ಮದುವೆ ಮಾಡ್ಬೇಕು ಎನ್ನುವುದೂ ಕೂಡಾ ಗಂಡು ಹೆತ್ತವರ ಬೇಡಿಕೆಯಾಗಿರುತ್ತಿತ್ತು.

ಕನ್ಯಾಪಿತೃ ಮುಖದಲ್ಲಿ ಒಸಿಯುವ ಬೆವರು ವರೆಸಿಕೊಳ್ಳುತ್ತಾ 'ಯಥಾನುಶಕ್ತಿ ಮಾಡ್ಕೊಡ್ತೀವಿ. ನೀವು ಕೇಳಿದ್ದೆಲ್ಲಾ ನಡೆಸಿಕೊಡೋ ಯೋಗ್ತಿ ನಂಗಿಲ್ಲ.' ಎಂದು ಕುಂಯ್ಗುಟ್ಟುವುದೂ, 'ಹಂಗಾರೆ ಮುಗೀತಲ್ಲ, ನಾವು ಎದ್ವಿ..' ಎನ್ನುತ್ತಾ ಮಾತುಕತೆಗೆಂದು ಚಟ್ಟೆಮುಟ್ಟೆ ಹಾಕಿ ಜಮಖಾನದ ಮೇಲೆ ಕೂತಿದ್ದ ಹಿರೀಕ ಹೆಗಲ ಮೇಲಿನ ಶಲ್ಯ ಕೊಡಕಿ ಮತ್ತೆ ಹಾಕಿಕೊಳ್ಳುತ್ತಾ ಎದ್ದು ನಿಲ್ಲುವುದೂ ಮಾಮೂಲು ಎಂಬಂತೆ ನಡೆಯುತ್ತಿತ್ತು. ಯಾರೋ ಸಂಧಾನ ಮಾಡಿ ಅವರ ಆವೇಶ ಇಳಿಸಿ ಮತ್ತೆ ಕೂರುವಂತೆ ಮಾಡುತ್ತಿದ್ದರು. ಹಗ್ಗ ಜಗ್ಗಾಟ ಮುಂದುವರಿದು ಕೊನೆಗೆ ಒಂದು ರಾಜೀಸೂತ್ರಕ್ಕೆ ಎರಡು ಕಡೆಯವರೂ ಬದ್ಧರಾದ ಮೇಲೆ ಇಷ್ಟು ಹೊತ್ತು ಕಿತ್ತಾಡಿಕೊಂಡಿದ್ದು ಇವರೇ ಹೌದಾ ಅನ್ನುವ ಹಾಗೆ ಭಾರೀ ನಂಟು. ಹಹ್ಹಹ್ಹಾ..., ಹೊಹ್ಹೊಹ್ಹೋ..ಗಳ ಕೆಳೆತನ. ಒಳಗೆ ಕಿವಿ ನೆಟ್ಟಗೆ ಮಾಡಿಕೊಂಡು, ಉಸಿರು ಬಿಗಿ ಹಿಡಿದು ಕೂತಿರುತ್ತಿದ್ದ ಹುಡುಗಿಗೆ ಸಮಾಧಾನ ಮೈದುಂಬಿ ಜೀವ ಗರಿ ಹಗುರಾದ ಅನುಭವ.

'ಏನು ಆಸ್ತೀಲಿ ಪಾಲು ಕೊಡ್ತಾರಾ? ಈಗ್ಲೇ ಸಾಧ್ಯವಾದಷ್ಟು ಹಿರಿದು ಬಿಡಬೇಕು' ಎಂದು ಗಂಡಿನ ಕಡೆಯವರ ಲೆಕ್ಕಾಚಾರ. ಸಾಲಿಗೆ ಹೆಣ್ಣು ಮಕ್ಕಳು ಮದುವೆಗೆ ನೆರೆದು ನಿಂತ ಮನೆಯಾಗಿದ್ದರೆ ಕನ್ಯಾಪಿತೃವಿನ ಜೀವ ಮೇಲೆ ಹೋಗಿ ಕೆಳಗೆ ಬರುತ್ತಿತ್ತು. ಭರ್ತಿ ಇದ್ದುಳ್ಳವರಾದರೆ ಗಂಡಿನವರು ಬಾಯ್ಬಿಟ್ಟು ಕೇಳಬೇಕಾದ್ದೇ ಇಲ್ಲ. ಆದರೆ ಅತ್ತಲೂ ಅಲ್ಲದ, ಇತ್ತಲೂ ಅಲ್ಲದ ಮಧ್ಯಮ ವರ್ಗದವರಿಗೆ ಒಂದು ಮದುವೆ ಅಂದರೆ ಬಿಸಿ ತುಪ್ಪ. ಹತ್ತೆಂಟು ಹುಡುಗಿಯರನ್ನು ನೋಡಿ ಆಯ್ಕೆಯ ಹಕ್ಕನ್ನು ತಮ್ಮದಾಗಿಸಿಕೊಂಡಿರುತ್ತಿದ್ದ ಗಂಡಿನವರಿಗೆ ಹುಡುಗಿ ಮನೆಯವರಿಂದ ನಿರಾಕರಣೆ ಸಾಧ್ಯವಾಗಬಹುದು ಎನ್ನುವ ಕಲ್ಪನೆ ಇರುತ್ತಿದ್ದಿದ್ದೇ ಕಮ್ಮಿ. ಹಾಗಾಗಿ ಹುಡುಗಿ ಸರ್ವವಿಧದಲ್ಲೂ ಒಪ್ಪಿಗೆಯಾದಲ್ಲಿ ಮುಂದಿನ ಮಾತುಕತೆಯ ಕುರಿತಾಗಿ ಗಂಡಿನ ಕಡೆಯವರು ಪತ್ರ ಬರೆದು ತಿಳಿಸುತ್ತಿದ್ದರು. ಆದರೆ ರಾಮಚದ್ರನ ಕೇಸಿನಲ್ಲಿ ಈ ಮನೆಯವರಿಗೆ ಸಹಜವಾಗಿ ಹಿಂಜರಿಕೆ ಇತ್ತು. ಒಂದು ಕುಟುಂಬಕ್ಕೆ ಸೇರಿದ ಸಮಸ್ತ ಆಸ್ತಿಪಾಸ್ತಿ, ವಸ್ತುವಾಹನಾದಿಗಳೆಲ್ಲಾ ಕಾಲಾನುಕ್ರಮದಲ್ಲಿ ಇವರ ವಂಶಕ್ಕೆ ಸೇರ್ಪಡೆಯಾಗುವಂತಾ ವಿಚಾರ. ಅವರ ಬೇಡಿಕೆಗಳು, ಬಯಕೆಗಳು ಏನೇನಿವೆಯೋ ಯಾರಿಗೆ ಗೊತ್ತುಂಟು? ತಾವಾಗಿ ಕೈ ತೋರಿಸಿ ಅವಲಕ್ಷಣ ಅನ್ನಿಸಿಕೊಳ್ಳುವುದು ಬೇಡ, ಅವರ ಮನಸ್ಸಿನಲ್ಲೇನಿದೆಯೋ ಅದು ಮೊದಲಿಗೆ ಗೊತ್ತಾಗಲಿ ಎಂದು ಬಾಯಲ್ಲಿ ಅಕ್ಕಿಕಾಳು ಹಾಕಿಕೊಂಡು ಕಾದು ಕಾದು ಕಾದು, ರಾಯಭಾರಿಯಾಗಿ ಬಂದೇಬಿಟ್ಟನಲ್ಲ ಬ್ರಾಹ್ಮಣ? ಶುಭಸುದ್ದಿಯ ನಿರೀಕ್ಷೆಯಿಂದ ರಾಮಚಂದ್ರನ ಮುಖ ಊರಗಲವಾಗಲು ಮತ್ತೊಂದು ಕಾರಣ ಇತ್ತು.

## ಆತಂಕ

ಮದುವೆ
ದಿನದಂದು
ತಂದೆಗೆ ಒಂದೇ ಆತಂಕ
ವಧೂವರರು
ಒಟ್ಟಿಗೆ ಇರ್ತಾರೋ
ಇಲ್ಲವೋ ತಾಳಿ ಕಟ್ಟೋತಂಕ

★ ಗೀತಾಶಾಸ್ತ್ರಿ




## ಗಿಣಿ ಶಾಸ್ತ್ರ

ಮೊನ್ನೆ ಮೊನ್ನೆ ಗಿಳಿಶಾಸ್ತ್ರ ಹೇಳುವವನೊಬ್ಬ ಮನೆ ಬಾಗಿಲಿಗೆ ಬಂದಿದ್ದ. ಕುಟ್ಟೆಹುಳದಂತೆ ತಲೆ ಕೊರೆಯುತ್ತಿದ್ದ ರಾಮಚಂದ್ರನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಅವನ ಅಮ್ಮನಿಗೆ ಒಂದು ಆಧಾರ ಸಿಕ್ಕಿದಂತಾಗಿತ್ತು. ಪಂಜರದಲ್ಲಿ ಕೂಡಿಟ್ಟಿದ್ದ ಗಿಣಿರಾಮ ಪಂಜರದ ಬಾಗಿಲು ಎತ್ತುತ್ತಿದ್ದಂತೆ ಪುಟುಪುಟು ಹೆಜ್ಜೆ ಹಾಕುತ್ತಾ ಹೊರಗಡೆ ಬಂದು ತನ್ನೆದುರು ಹರವಿದ್ದ, ದೇವಾನುದೇವತೆಗಳ ಪಟ ಅಚ್ಚಿಸಿ ಭವಿಷ್ಯ ಬರೆದಿದ್ದ ಪುಟ್ಟ ಕಾರ್ಡ್‌ಗಳನ್ನು ಒಂದೊಂದಾಗಿ ಕೊಕ್ಕಿನಿಂದ ಆಯ್ದು ಬದಿಗಿಟ್ಟು, ಕೊನೆಗೆ ಒಂದು ಕಾರ್ಡನ್ನು ಕುಕ್ಕರುಗಾಲಲ್ಲಿ ಕೂತಿದ್ದ ತನ್ನ ಅನ್ನದಾತನ ಕೈಗಿತ್ತು ಪಂಜರದೊಳಗೆ ಸೇರಿಕೊಂಡಿತ್ತು. ಸುತ್ತ ಕುತೂಹಲದಿಂದ ಮುಕುರಿಕೊಂಡಿದ್ದ ಮನೆಯವರು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಕಾರ್ಡಿನಲ್ಲಿ ಸೀತಾರಾಮರ ಕಲ್ಯಾಣೋತ್ಸವದ ಚಿತ್ರದೊಂದಿಗೆ ಮನೆಯಲ್ಲಿ ಶುಭ ಕಾರ್ಯ, ನಿರೀಕ್ಷಿಸಿದ ಕೆಲಸದಲ್ಲಿ ಜಯ ಎನ್ನುವಂತ ವಕ್ಕಣೆ. ಅಮ್ಮ ಉಬ್ಬಿ ಹೋಗಿದ್ದಳು.

ಮೊರದಲ್ಲಿ ಸೇರಕ್ಕಿ ಹಾಕಿಕೊಟ್ಟು, ಮೇಲೆ ಐದು ರೂಪಾಯಿಯ ನೋಟು. ತಿರಿಯೋಕೆ ಬಂದೋರಿಗೆ ಕೊಡೋದಕ್ಕೆ ಒಂದು ಲಿಮಿಟ್ ಬ್ಯಾಡ್ವಾ? ಅಣ್ಣ ಗೊಣಗಿಕೊಂಡಿದ್ದ. ಸತ್ಯವಾಗುತ್ತೋ, ಬಿಡುತ್ತೋ ಬೇರೆ ಮಾತು. ಆದರೆ ಶುಭವಾರ್ತೆಯ ಮೇಲೆ ಕಣ್ಣು ಹಾಯಿಸಿ ರಾಮಚಂದ್ರ ಕುಸಿಯುತ್ತಿದ್ದ ಆಶಾಗೋಪುರಕ್ಕೆ ನಂಬುಗೆಯ ಊರುಗೋಲು ಕೊಟ್ಟು ನಿಲ್ಲಿಸಿದ್ದ, ತತ್ಕಾಲಕ್ಕೆ. ಆದರೆ ಅತ್ತಿಗೆ ಭವಾನಿ ಹೇಳಿದ ಮಾತೊಂದು ಮನಸ್ಸಿಗೆ ಕಚ್ಚು ಮಾಡಿತ್ತು.

'ಮನೆಯಲ್ಲಿ ಶುಭಕಾರ್ಯ ಸರಿ. ಮದುವೇನೇ ಅಂತ ಇಟ್ಗಳಾಣ. ಆದ್ರೆ ಇದೇ ಹುಡುಗಿ ಆಗುತ್ತೇಂತ ಬರೆದಿರ್ಲಿಲ್ಲಲ್ಲ? ಸದ್ಯದಲ್ಲೇ ಇನ್ನೊಂದು ಪ್ರಸ್ತಾಪ ಬಂದ್ರೆ?' ಅವಳ ಮಾತನ್ನು ಅರ್ಧಕ್ಕೆ ತಡೆದು ಅಮ್ಮ ಅರ್ಥ ಕಟ್ಟಿದ್ದಳು

'ನಿರೀಕ್ಷಿಸಿದ ಕಾರ್ಯದಲ್ಲಿ ಜಯ ಅಂದ್ರೆ ಮತ್ತೆಂತದು? ನಾವು ನಿರೀಕ್ಷೆ ಮಾಡ್ತಿರೋದು ಇದೇ ಸಂಬಂಧ ಅಲ್ವಾ?'

ಮುಂದೆ ಮಾತಾಡದೆ ಗಿಳಿಶಾಸ್ತ್ರದವನು ಖಾಲಿ ಮಾಡಿದ್ದ ಮೊರ ಎತ್ತಿಕೊಂಡು ಒಳಗೆ ಹೋಗಿದ್ದಳು ಅತ್ತಿಗೆ. ಭವಿಷ್ಯವಾಣಿ ಅನ್ನುವುದು ಪೂರ್ತಿ ಸುಳ್ಳಲ್ಲ ಎಂದು ನಂಬಿದವರಿಗೆ ಮನದಟ್ಟು ಮಾಡಿಕೊಡುವಂತೆ ಬಂದೇ ಬಂದಿದ್ದರು ಐತಾಳರು. ಹುಡುಗಿಯ ಪೈಕಿಯವರು ಪುಕಾರು ಮಾಡುತ್ತಿರುವ ವಿಷಯ ಕಿವಿಯ ಮೇಲೆ ಬೀಳುತ್ತಿದ್ದಂತೆ ಅಮ್ಮ ಊರಗಲ ಮಕ ಮಾಡಿಕೊಂಡು ಕೇಳಿದ್ದಳು.

'ಮೊದ್ಲು ಮುಂಚೆ ಅವರ ಬಾಯಲ್ಲೇ ಬರ್ಲಿ ಅಂತ ಕಾಯ್ತಿದ್ದಿದ್ದು ನಾವು. ಏನಂತೆ ಸಮಾಚಾರ?'

'ಅವರ ಕಡೆಂದ ಅಡ್ಡಿಲ್ಲ. ನಿಮ್ಗೆ ಒಪ್ಪಿಗೆ ಆದ್ರೆ ಅವರಿಗೂ ಒಪ್ಪಿಗೆ..' ಘನಕಾರ್ಯ ಸಾಧಿಸಿದವರ ಹಾಗೆ ರಾಗವಾಗಿ ಹೇಳಿದ್ದರು ಐತಾಳರು. ಆಹಾ, ಅದುವರೆಗೆ ಅನುಭವಿಸಿದ್ದ ತಲ್ಲಣಗಳೆಲ್ಲಾ ಅರಳೆಯಾಗಿ ಗಾಳಿಯಲ್ಲಿ ಹಾರಿ ಹೋಗಿ ರಾಮಚಂದ್ರನ ಹರ್ಷೋಲ್ಲಾಸ ಮುಗಿಲು ಮುಟ್ಟಿತ್ತು. ಅವನ ಅಮ್ಮನ ಪರಿಸ್ಥಿತಿಯೂ ಹೀಗೇ. ಐತಾಳರ ಮಕ ಕಾಣುತ್ತಿದ್ದಂತೆ ಇವರು ಊಹಿಸಿಕೊಂಡಿದ್ದ ಶುಭವಾರ್ತೆ ಕೊನೆಗೂ ಕಿವಿದೆರೆಗಳಿಗೆ ತಂಪೆರೆದಿತ್ತು.

'ನಡಿಯೇ, ಒಳ್ಳೇ ಸುದ್ದಿ ತಂದಿದಾರೆ. ರಾತ್ರಿ ಊಟಕ್ಕೆ ಒಂದು ಚಿತ್ರಾನ್ನ, ಪಾಯಸದ ಅಡಿಗೆ ಮಾಡಿಬಿಡು. ಎಲ್ರೂ ಬಾಯಿ ಸೀಂ ಮಾಡ್ಕಳಾಣ..' ಸೊಸೆಯ ಕಡೆ ತಿರುಗಿ ಒಂದು ಆದೇಶ.

'ಮಾರಾಯ್ರಾ, ನಿಮ್ಮ ಹೊಟ್ಟೆ ತಣ್ಣಗಿರ್ಲಿ. ಒಂದು ಮದುವೆ ಮಾಡಿಸೋದು ಅಂದ್ರೆ ಒಂದು ಯಜ್ಞ ಮಾಡಿಸಿದಷ್ಟು ಪುಣ್ಯದ ಕಾರ್ಯ ಅಂತಾರೆ. ನೀವು ತಲೆ ಹಾಕ್ದಿದ್ರೆ ಇಂತಾ ಕಡೆ ಇಂತಾದ್ದೊಂದು ಹುಡುಗಿ ಮದುವೆಗಿದೆ ಅಂತ ನಮಗೆ ಕನಸಲ್ಲೂ ಗೊತ್ತಾಗ್ತಿರ್ಲಿಲ್ಲ..' ಐತಾಳರಿಗೆ ಕೃತಜ್ಞತೆಯ ಸಮರ್ಪಣೆ.

'ಹಂಗಾರೆ ನಿಮಗೆ ಒಪ್ಪಿಗೆ ಅಂತಾಯ್ತು. ಏನಂತಾನೆ ಹುಡುಗ? ನನ್ನ ಕೇಳ್ಲಿಲ್ಲ ಅನ್ಬೇಡ ಮಾರಾಯಾ, ಹುಡುಗೀನೂ ಮಾತಾಡಿಸ್ಗಂಡು ಬಂದಿದೀನಿ ನಾನು..' ಕುಶಾಲಿನಿಂದ ಮಾತಾಡುತ್ತಿದ್ದಾರೆ ಐತಾಳರು. ರಾಮಚಂದ್ರ ಸುಖದ ಅಲೆಗಳ ಮೇಲೆ ತೇಲುವಂತಾಗಿದ್ದಾನೆ. ವರ್ಷಾವರ್ಷ ಅಡಿಕೆ ಸಂಭಾವನೆಗೆ ಬರುತ್ತಿದ್ದ ಇಂತವರ ಕುರಿತು ಅವನಿಗೆ ವಿಶೇಷದ ಯಾವ ಗೌರವಾದರಗಳೂ ಇರಲಿಲ್ಲ. ಅಸಲಿಗೆ ಇಂತವರನ್ನು ಅವನು ಬಾಯ್ಬಿಟ್ಟು ಮಾತಾಡಿಸಿದವನಲ್ಲ. ಊಟಕ್ಕೆ